ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 17-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಆ ಬಗ್ಗೆ ಕೇಳಿದಾಗ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ತಿಳಿಸಿರುತಾರೆ. ನಿಪಿ-55 ಕ್ರಯಸಾಧನದ ಬಾಕಿ ಉಳಿದ ರೂ 15000 ಗಳನ್ನು ನನ್ನ ತಾಯಿ ಕ್ರಯಕ್ಕೆ ಕೊಟ್ಟ ಬಗ್ಗೆ ಸದ್ರಿ ವ್ಯಕ್ತಿ ಕೊಟ್ಟ ನೊಂದಾಯಿತ ದಾಖಲೆಯನ್ನು ತೋರಿಸಿ ಅದರ ಪ್ರಕಾರ ರೂ 15000 ನ್ನು ನನ್ನ ತಾಯಿ ಪಾವತಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ 50 ಸೆಂಟ್ಸ್ ಜಾಗದಲ್ಲಿ  ಸೂರ್ಯನಾರಾಯಣ ರಾವ್ ಮತ್ತು ಕೆವಿ ಸಾಮದ ಎನ್ನುವವರಿಗೆ ತಲಾ 5.5 ಸೆಂಟ್ಸ್ ಜಾಗವನ್ನು ಮಾರಾಟ ಮಾಡಿರುತಾರೆ ಎಂದರೆ ಸರಿ. ನನ್ನ ತಾಯಿಯ ಆರ್ಥಿಕ ಪರಿಸ್ಥಿತಿ ಸರಿ ಇಲ್ಲದೇ ಇದ್ದುದರಿಂದ ನನ್ನ ತಾಯಿ ಮಾರಾಟ ಮಾಡಿರುತಾರೆ ಎಂದರೆ ಸರಿಯಲ್ಲ.  11 ಸೆಂಟ್ಸ್ ಜಾಗವನ್ನು ಒಟ್ಟು ರೂ. 11 ಲಕ್ಷಕ್ಕೆ ಮಾರಾಟ ಮಾಡಲಾಗಿದೆ ಆದರೇ ಕ್ರಯಪತ್ರದಲ್ಲಿ ಎಷ್ಟು ಕಾಣಿಸಲಾಗಿದೆ ಎಂದು ನನಗೆ ಗೊತ್ತಿಲ್ಲ . 1987 ರಲ್ಲಿ ನನಗೆ 12 ವರ್ಷ ವಯಸ್ಸು ಆಗಿತ್ತು. ಆ ಸಮಯದಲ್ಲಿ ಒಂದನೇ ಪ್ರತಿವಾದಿಗೆ 17 ವರ್ಷ. ನಿಪಿ 80 ಮತ್ತು 84 ಕ್ರಯಪತ್ರಗಳನ್ನು ನಾನು ಒಪ್ಪುತ್ತೇನೆ. ನಾನು ಅಪ್ರಾಪ್ತನಾಗಿರುವಾಗ ನನ್ನ ತಾಯಿ ಈ ವಿಚಾರವನ್ನು ನನಗೆ ಹೇಳಿರುತ್ತಾರೆ . ಸಾಕ್ಷಿ ಮುಂದುವರಿದು ಮಾರಾಟ ಮಾಡಿದ ಸ್ಥಳದಲ್ಲಿ ಕೊಳಚೆ ನೀರು ಹೋಗುತಿತ್ತು ಆ ಕಾರಣದಿಂದ ನನ್ನ ತಾಯಿ 11 ಸೆಂಟ್ಸ್ ಜಾಗವನ್ನು ಮಾರಾಟ ಮಾಡಿರುತ್ತಾರೆ.  11 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ ಎಂದು ನಮ್ಮ ಬಳಿ ದಾಖಲೆ ಇಲ್ಲ. ಆದರೇ ನನ್ನ ತಾಯಿ 11 ಲಕ್ಷಕ್ಕೆ ಮಾರಾಟ ಮಾಡಿದ್ದೇವೆ ಎಂದು ಹೇಳಿದ್ದರು. ಸದ್ರಿ 50 ಸೆಂಟ್ಸ್ ಜಾಗದಲ್ಲಿ 11 ಸೆಂಟ್ಸ್ ಜಾಗವನ್ನು ಮಾರಾಟ ಮಾಡಿದ ನಂತರ ಉಳಿಕೆ ಜಾಗದ ಪೈಕಿ 23

ಸೆಂಟ್ಸ್ ಜಾಗದಲ್ಲಿ ನನ್ನ ತಾಯಿ ಸಾಯಿ ಸದನ ಎನ್ನುವ ಅಪಾರ್ಟ್ಮೆಂಟ್ ಕಟ್ಟಲು ಪ್ರಾರಂಬಿಸಿದರು ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ತಾಯಿ ಮತ್ತು ನಾವು ಒಟ್ಟಿಗೆ ಸೇರಿ ಕಟಲು ಪ್ರಾರಂಭಿಸಿದೆವು ಎಂದು ತಿಳಿಸಿರುತಾರೆ. 1995 ರಲ್ಲಿ ಆ ರೀತಿ ಕಟ್ಟಡ ಕಟ್ಟಲು ಪ್ರಾರಂಭಿಸಿದೆವು. ಅದು 40000 ಚದರಡಿಯ ಕಟ್ಟಡ. ಸದರಿ ಕಟ್ಟಡದಲ್ಲಿ 40 Flat ಗಳು ಇದ್ದವು. ಸ್ಧ್ರಿ ಕಟ್ಟಡ ಕಟ್ಟಲು ನನ್ನ ತಾಯಿಯ ಹೆಸರಿನಲ್ಲಿ ಲೈಸೆನ್ಸ್ ಪಡೆಯಲಾಗಿತ್ತು. ನನ್ನ ತಾಯಿ ಕಟ್ಟಡ ಸಂಪೂರ್ಣವಾದ ನಂತರ  ಸಂಬಂಧಪಟ್ಟ ಮುನ್ಸಿಪಾಲಿಟಿಯಿಂದ Occupation Certificate ಪಡೆದುಕೊಂಡಿದ್ದಾರೆ ಎಂದರೆ ಸರಿ . ಸ್ಧ್ರಿ ಕಟ್ಟಡ 31500 ಚದರಡಿ ವಿಸ್ತೀರ್ಣದ ಕಟ್ಟಡ ಎಂದರೆ ಸಾಕ್ಷಿ ಅನುಮತಿ  ನೀಡುವಾಗ 31500 ಚದರಡಿಗೆ ಕೊಟ್ಟಿರಬಹುದು, ಆದರೇ ಕಟ್ಟಡವನ್ನು ಕಾನೂನು ಬಾಹಿರವಾಗಿ 40000 ಚದರಡಿ ಕಟ್ಟಿರುತ್ತಾರೆ ಎಂದು ತಿಳಿಸಿರುತಾರೆ. ಕಾನೂನು ಬಾಹಿರವಾಗಿ ಕಟ್ಟಡ ಕಟ್ಟಿರುವ ಬಗ್ಗೆ ನಾನು ಮುನ್ಸಿಪಾಲಿಟಿಗೆ ಆ ಸಮಯದಲ್ಲಿ ತಿಳಿಸಿಲ್ಲ . ನನ್ನ ತಾಯಿ ತಿಳಿಸಿರಬಹುದು ನನ್ನ ತಾಯಿ ಜಿಪಿಎ ಹೋಲ್ಡರ್ ಆಗಿ ಒಂದನೇ ಪ್ರತಿವಾದಿ ಇದ್ದರು . ಕಾನೂನು ಬಾಹಿರವಾಗಿ 8500 ಅಡಿ ರಷ್ಟು ಕಟ್ಟಡವನ್ನು ಕಟ್ಟಿರುತ್ತಾರೆ ಎಂದು ಹೇಳಲು ನನ್ನ ಬಳಿ ದಾಖಲೆ ಇಲ್ಲ . ಸಾಕ್ಷಿ ಮುಂದುವರಿದು ನನ್ನ ಬಳಿ ಯಾವುದೇ ಒಂದು ಸಣ್ಣ ದಾಖಲೆ ಕೂಡ ಇಲ್ಲ ಎಲ್ಲಾ ದಾಖಲೆಗಳು ನನ್ನ ಅಣ್ಣನಾದ ಒಂದನೇ ಪ್ರತಿವಾದಿ ಬಳಿ ಇದೆ ಮತ್ತು ನಾನು ವಾಸ ಇರುವ ಮನೆಯ ದಾಖಲೆಗಳು ಕೂಡ  ನನ್ನ ಅಣ್ಣನಾದ ಒಂದನೇ ಪ್ರತಿವಾದಿ ಬಳಿ ಇದೆ ಎಂದು ತಿಳಿಸಿರುತಾರೆ . ಸದರಿ ಕಟ್ಟಡದಲ್ಲಿ ಇದ್ದ 37 flat  ಗಳನ್ನು 1996 ರಿಂದ 2006 ರವರೆಗೆ ಮಾರಾಟ ಮಾಡಿರುತಾರೆ ಎಂದರೆ ಸಾಕ್ಷಿ ನ್ಣ ತಾಯಿಯ ಜಿಪಿಎ ಹೋಲ್ಡರ್ ಆಗಿ ನನ್ನ ಅಣ್ಣನಾದ ಒಂದನೇ ಪ್ರತಿವಾದಿ ಮಾರಾಟ ಮಾಡಿರುತ್ತಾನೆ ಎಂದು ತಿಳಿಸಿರುತ್ತಾರೆ. ನನ್ನ ತಾಯಿ flat no. 601, 605 ಮತ್ತು 606 ಗಳನ್ನು ನನ್ನ ತಮ್ಮ 2 ನೇ ಪ್ರತಿವಾದಿಗೆ ವ್ಯವಸ್ಥಾ ಪತ್ರ ಮಾಡಿಕೊಟ್ಟಿರುತಾರೆ ಎಂದರೆ  ಸರಿಯಲ್ಲ . ಸಾಕ್ಷಿ ಮುಂದುವರಿದು ನನ್ನ ಅಣ್ಣ ಒಂದನೇ

ಪ್ರತಿವಾದಿ ನನ್ನ ತಾಯಿಯ ಜಿಪಿಎ ಹೋಲ್ಡರ್ ಆಗಿ 2003 ರಲ್ಲಿ ಬರೆದುಕೊಟ್ಟಿರುತ್ತಾರೆ , ಕಾರಣ ಆದಾಯ ತೆರಿಗೆ ಇಲಾಖೆಯ Investigation Cell ರವರು ನನ್ನ ಅಣ್ಣನನ್ನು ತನಿಖೆಗಾಗಿ ನೋಟಿಸು ಕೊಟ್ಟು ಕರೆದಿದ್ದರು. ಆದ್ದರಿಂದ ನನ್ನ ಅಣ್ಣ ಆ 3 flat ಗಳನ್ನು ನನ್ನ ತಮ್ಮನ ಹೆಸರಿಗೆ ದಾನಪತ್ರ ಮಾಡಿಕೊಟ್ಟು ನಂತರ ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ಅದನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಸಾಕ್ಷಿಗೆ ವ್ಯವಸ್ಥಾ ಪತ್ರದ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದರಲ್ಲಿ ಇರುವ ಸಹಿ ನನ್ನ ತಾಯಿಯದಾ ಇಲ್ಲವಾ ಎಂದು ನಾನು ದೃಢಿಕೃತ ದಾಖಲೆ ಪಡೆದು ನೋಡಿ ಹೇಳಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ಸಾಕ್ಷಿಗೆ Settlement Deed ನಲ್ಲಿ ಇರುವ ಫೊಟೋವನ್ನು ತೋರಿಸಲಾಗಿ ಸಾಕ್ಷಿ ನೋಡಿ ಅದು ನನ್ನ ತಾಯಿ ಮತ್ತು ನನ್ನ ತಮ್ಮನ ಫೊಟೋ ಎಂದು ತಿಳಿಸಿದ ಮೇರೆಗೆ ಸದ್ರಿ ದಾಖಲೆಯನ್ನು ನಿಡಿ-7 ಎಂದು ಗುರುತಿಸಲಾಯಿತು. ಅದೇ ಕಟ್ಟಡದ 7 ನೇ ಮಹಡಿಯಲ್ಲಿ ಇದ್ದ ಪೆಂಟ್ ಹೌಸ್ ನ್ನು ಕೂಡ 2 ನೇ ಪ್ರತಿವಾದಿಯಾದ ನನ್ನ ತಮ್ಮನಿಗೆ settlement deed ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಉಳಿಕೆ 16 ಸೆಂಟ್ಸ್ ಜಾಗವನ್ನು ಅದರಲ್ಲಿ ಇರುವ 4-381 ಸಂಖ್ಯೆಯ ಡೋರ್ ನಂಬರ್ ನ ಮನೆಯನ್ನು ಕೂಡ ನನ್ನ ತಮ್ಮನಾದ 2 ನೇ ಪ್ರತಿವಾದಿಗೆ settlement deed ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ತಮ್ಮನಾದ 2 ನೇ ಪ್ರತಿವಾದಿ ಸದ್ರಿ settlement deed ನ್ನು ಒಪ್ಪಿಕೊಂಡು ಅದರ ಖಾತೆಯನ್ನು ಆತನ ಹೆಸರಿಗೆ ಬದಲಾಯಿಸಿ ಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ನನ್ನ ತಮ್ಮನಾದ 2 ನೇ ಪ್ರತಿವಾದಿ flat no. 601,605 ಮತ್ತು 606 ನ್ನು ನಿಪಿ-51 ರ ಮುಖೇನ ಬೇರೆಯವರಿಗೆ ಮಾರಾಟ ಮಾಡಿರುತಾರೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು 1 ನೇ ಪ್ರತಿವಾದಿಯಾದ ನನ್ನ ಅಣ್ಣ ಮುಂದೆ ನಿಂತು ಸದ್ರಿ flat ಗಳ ಬಗ್ಗೆ ಕ್ರಯಪತ್ರಕ್ಕೆ 2 ನೇ ಪ್ರತಿವಾದಿಯ ಸಹಿ ಪಡೆದು ಮಾರಾಟ ಮಾಡಿರುತ್ತಾರೆ ಎಂದು

ತಿಳಿಸಿರುತ್ತಾರೆ. ಮೇಲಿನ 3 flat ಗಳ ಪೈಕಿ 1 flat ನ್ನು Mairoce S Kundar ಎನ್ನುವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ 3 flat ಗಳು ಮತ್ತು 16 ಸೆಂಟ್ಸ್ ಜಾಗವನ್ನು ಈ ದಾವೆಯಲ್ಲಿ ಕಾಣಿಸಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕಾಣಿಸಿಲ್ಲ ಎಂದು ತಿಳಿಸಿರುತ್ತಾರೆ. ಈ ಆಸ್ತಿಗಳು ಕೂಡ ಪಾಲಾಗತಕ್ಕಂತಹ ಆಸ್ತಿಗಳು. ಸದ್ರಿ ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. 16 ಸೆಂಟ್ಸ್ ಜಾಗದಲ್ಲಿ ಮತ್ತು ಅದರಲ್ಲಿ ಇರುವ ಡೋರ್ ನಂಬರ್ 4-381 ರಲ್ಲಿ ನನ್ನ ಸಹೋದರ ನಂದಾಗೋಪಾಲ್ ಮತ್ತು ನಾನು ವಾಸಾವಾಗಿದ್ದೇವೆ.

**ಈ ಹಂತದಲ್ಲಿ ಪಾಟೀ ಸವಾಲನ್ನು ಮದ್ಯಾಹ್ನ ಕ್ಕೆ ಮುಂದುಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.